# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧-೨೨ ದಿನಾಂಕ : ೨೮-೦೧-೨೦೨೨



ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
..........................................ಬೆಂಗಳೂರು

ಮಾನ್ಯರೆ,

**ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## ವಿಶ್ರಾಂತ ಸರ್ವೋಚ್ಛ ನ್ಯಾಯಮೂರ್ತಿಗಳಾದ

## ಡಾ. ಶಿವರಾಜ ವಿ. ಪಾಟೀಲ ಅವರಿಗೆ

## ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ದಿನಾಂಕ ೧೯-೦೧-೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **೨೦೨೧ನೆಯ ಸಾಲಿನ "ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ"**ಗೆ ವಿಶ್ರಾಂತ ನ್ಯಾಯಮೂರ್ತಿಗಳಾದ **ಶ್ರೀ ಶಿವರಾಜ ವಿ. ಪಾಟೀಲ** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೨೫,೦೦೦ (ಇಪ್ಪತ್ತೈದು ಸಾವಿರ ರೂಪಾಯಿ ಮಾತ್ರ)** ನಗದು. ಇದರ ಜೊತೆಗೆ ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನೂ ಒಳಗೊಂಡಿರುತ್ತದೆ.

ಭಾರತದ ಸರ್ವೋಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ **ಡಾ. ಶಿವರಾಜ ವಿ. ಪಾಟೀಲರು** ಈ ದೇಶ ಕಂಡ ಅಪ್ರತಿಮ ನ್ಯಾಯಾಧೀಶರು. ಬಿಸಿಲನಾಡೆಂದೇ ಪ್ರಖ್ಯಾತವಾದ ರಾಯಚೂರು ಜಿಲ್ಲೆಯ ಕುಗ್ರಾಮವಾದ ಮಲದಕಲ್‌ನಲ್ಲಿ (೧೨-೦೧-೧೯೪೦) ಜನಿಸಿದ ಶ್ರೀಯುತರು, ಇಂದು ರಾಷ್ಟ್ರ-ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿದ್ದಾರೆ. ಪದವಿ ಹಾಗೂ ಕಾನೂನು ಪದವಿಯನ್ನು ಕಲಬುರಗಿಯಲ್ಲಿ ಪಡೆಯುವುದರೊಂದಿಗೆ ನ್ಯಾಯವಾದಿಯಾಗಿ ತಮ್ಮ ವೃತ್ತಿಯನ್ನು ಜುಲೈ **೧೯೬೨**ರಲ್ಲಿ ಪ್ರಾರಂಭಿಸಿದರು. ಯಾವ ಕಾನೂನು ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದರೋ ಮುಂದೆ ಅದೇ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ತದನಂತರ **ಗೌರವ ಪ್ರಾಂಶುಪಾಲರಾಗಿ** ಸೇವೆಸಲ್ಲಿಸಿದರು. **೧೯೬೨ರಿಂದ ಆರಂಭಗೊಂಡ ಇವರ ನ್ಯಾಯಾಂಗ ವೃತ್ತಿಜೀವನ ೧೯೯೦ರ ವರೆಗೆ ಗುಲಬರ್ಗಾ ಹಾಗೂ ಬೆಂಗಳೂರಿನಲ್ಲಿ ನ್ಯಾಯವಾದಿಗಳಾಗಿ ತಮ್ಮ ವಾಕ್‌ಚಾತುರ್ಯದ ಮೂಲಕ ಗಮನ ಸೆಳೆದರು**. ನಂತರ ಕರ್ನಾಟಕ, ತಮಿಳುನಾಡು, ಉಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಿ ನಂತರ ರಾಜಸ್ಥಾನದ ಹೈಕೋರ್ಟ್‌ನ **ಮುಖ್ಯ ನ್ಯಾಯಾಮೂರ್ತಿಗಳಾಗಿ** ವಸ್ತುನಿಷ್ಠವಾದ ನ್ಯಾಯ ತೀರ್ಮಾನಗಳನ್ನು ನೀಡುವ ಮೂಲಕ ಆಯಾ ರಾಜ್ಯಗಳ ಜನಮನ್ನಣೆಯನ್ನು ಗಳಿಸಿದರು.

ಪುಟ...೨ಕ್ಕೆ

೨೦೦೦ದಲ್ಲಿ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕಗೊಂಡು ರಾಷ್ಟ್ರಮಟ್ಟದಲ್ಲಿ ಅಪಾರ ಯಶಸ್ಸನ್ನು ಪಡೆದರು. **ಇವರಲ್ಲಿನ ನ್ಯಾಯಾಂಗ ದೃಷ್ಟಿ ಹಾಗೂ ನೀಡಿದ ತೀರ್ಮಾನಗಳು ಮಾನವೀಯ ನೆಲೆಯಲ್ಲಿ ಸಾಮಾಜಿಕ ಬದಲಾವಣೆ ತರುವಲ್ಲಿ ಮಹತ್ವದ ಪಾತ್ರವಹಿಸಿವೆ.** ಅಂತೆಯೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ, ಕಾರ್ಯನಿರ್ವಾಹಕ ಅಧ್ಯಕ್ಷರಾಗಿ, **೨ಜಿ ಸ್ಪೆಕ್ಟ್ರಂ ತನಿಖೆಯ ಏಕವ್ಯಕ್ತಿ ಸಮಿತಿ ಸದಸ್ಯರಾಗಿ,** ಕರ್ನಾಟಕದಲ್ಲಿ ಬಾಲ್ಯವಿವಾಹ ತಡೆಗಟ್ಟುವ ಕೋರ್ ಕಮಿಟಿಯ ಅಧ್ಯಕ್ಷರಾಗಿ, ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಳ್ಳುವ ಮೂಲಕ ತಮ್ಮ ವೃತ್ತಿಪರತೆ ಇತರರಿಗೆ ಅನುಕರಣೀಯವಾಗುವಂತೆ ಮಾಡಿದ್ದಾರೆ. **ಯಾವುದೇ ಕಾನೂನು ಅರ್ಥಪೂರ್ಣವಾಗಬೇಕಾದರೆ ಅದು ಕೇವಲ ಕಾಗದದ ಮೇಲೆ ಉಳಿಯದೆ ಜೀವನದ ನಡೆವಳಿಕೆಯ ಭಾಗವಾಗಬೇಕು** ಎಂಬ ಧ್ಯೇಯವಾಕ್ಯವನ್ನು ಜೀವನದುದ್ದಕ್ಕೂ ಪರಿಪಾಲಿಸಿದ್ದಾರೆ. ಜಾತೀಯತೆ, ಅಪರಾಧ ಮತ್ತು ಭ್ರಷ್ಟಾಚಾರಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಸಾತ್ವಿಕ ಹೋರಾಟದ ತುಡಿತವನ್ನು ಹೊಂದಿರುವ **ನ್ಯಾಯರತ್ನ, ಕಾಯಕಯೋಗಿ ಡಾ. ಶಿವರಾಜ ವಿ. ಪಾಟೀಲ** ಅವರು ಕನ್ನಡದ ಆಸ್ತಿಯಾಗಿದ್ದಾರೆ.

ಆಯ್ಕೆ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ಶ್ರೀ ಎಂ. ಪ್ರಕಾಶಮೂರ್ತಿ,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

---
ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.